2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 9/2021

| | | |
|---|---|---|
| ಸಾಕ್ಷಿದಾರರ ಹೆಸರು | - ಶಶಿಕಲ | ಪಿಡಬ್ಲೂ -05 |
| ಗಂಡನ ಹೆಸರು | - ರಂಗನಾಥ ನಾಯಕ | ಸಿಡಬ್ಲೂ -13 |
| ವಯಸ್ಸು | - 48 ವರ್ಷ | |
| ಉದ್ಯೋಗ | - ಕ್ಯಾಂಟೀನ್ ಕೆಲಸ | |
| ವಾಸ ಸ್ಥಳ | - ಪಾಳೆಗಾರ ಕ್ಯಾಂಪ್, ತರೀಕೆರೆ | |

ದಿನಾಂಕಃ 28.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿ ಗೊತ್ತಿಲ್ಲ. ಚಾಸಾ.12 ನನ್ನ ತಾಯಿ. ಮೃತ ಪ್ರೀತಂ ಗೊತ್ತಿಲ್ಲ. ದೂರುದಾರರ ಪರಿಚಯವಿಲ್ಲ. ನನಗೆ ಈ ಪ್ರಕರಣದಲ್ಲಿ ಯಾವುದೆ ಮಾಹಿತಿ ಇಲ್ಲ. ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

2. ದಿಃ 09.11.2019 ರಂದು ನಾನು ಈ ಪ್ರಕರಣದ ಕುರಿತು ತನಿಖಾಧಿಕಾರಿಯವರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ದಿಃ 05.11.2019 ರಂದು ಬೆಳಿಗ್ಗೆ ಸುಮಾರು 10.50 ಗಂಟೆ ಸಮಯದಲ್ಲಿ ನಾನು ಹಾಗೂ ನನ್ನ ತಾಯಿ ಚಾಸಾ.12 ರವರು ನಮ್ಮ ಪೆಟ್ಟಿಗೆ ಅಂಗಡಿಯಲ್ಲಿರುವಾಗ ಪ್ರಕರಣದ ಆರೋಪಿಗಳು ನಮ್ಮ

ಅಂಗಡಿಯ ಮುಂಬಾಗದಲ್ಲಿ ಹಾದುಹೊಗಿರುವ ಬಿ.ಹೆಚ್. ರಸ್ತೆಯಲ್ಲಿ ಒಂದು ಹಳದಿ ಬಣ್ಣದ ಸ್ವೆಟರ್ ಹಾಗೂ ಸೀರೆಯನ್ನು ಉಟ್ಟುಕೊಂಡು ಹೆಗಲ ಮೇಲೆ ಒಂದು ಸಣ್ಣ ಮಗುವನ್ನು ಹಾಕಿಕೊಂಡು ಗಾಬರಿಯಲ್ಲಿ ಜೋರಾಗಿ ಭದ್ರ ನಾಲೆಯ ಸೇತುವೆ ಕಡೆಗೆ ನಡೆದುಕೊಂಡು ಹೋದಳು ಎಂದರೆ ಗೊತ್ತಿಲ್ಲ. ಸ್ವಲ್ಪ ಸಮಯದ ನಂತರ ಸೇತುವೆ ಕಡೆ ಹೋದವಳು ವಾಪಾಸ್ಸು ಬೆಳಿಗ್ಗೆ 11.10 ಗಂಟೆಗೆ ತರೀಕೆರೆ ಕಡೆಗೆ ನಡೆದುಕೊಂಡು ಹೋಗುತ್ತಿದು ಅವಳ ಹೆಗಲ ಮೇಲೆ ಮಗು ಇರಲಿಲ್ಲ ಎಂದರೆ ಗೊತ್ತಿಲ್ಲ.

3. ಆರೋಪಿತಳು ತರೀಕೆರೆ ಕಡೆಗೆ ಗಾಬರಿಯಿಂದ ನಡೆದುಕೊಂಡು ಹೋದಳು ಮತ್ತು ಅರ್ಧಗಂಟೆ ಆದ ಮೇಲೆ ಒಬ್ಬ ವಯಸ್ಸಾದ ಹೆಂಗಸು ನಮ್ಮ ಅಂಗಡಿಗೆ ಬಂದು ಅವಳ ಸೊಸೆ ಕಮಲ ಅಲ್ಲಿಗೆ ಒಂದು ಸಣ್ಣ ಮಗುವನ್ನು ಎತ್ತುಕೊಂಡು ಬಂದಿರುತ್ತಾಳೆಯೇ ಎಂದು ನಮ್ಮನ್ನು ಕೇಳಿರುತ್ತಾಳೆ ಎಂದರೆ ಗೊತ್ತಿಲ್ಲ. ಆಗ ನಾನು ಮತ್ತು ಚಾಸಾ.12 ಹೌದು ಎಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ. ನಂತರ ಆರೋಪಿತಳು ಸೇತುವೆ ಕಡೆಯಿಂದ ಬರಿ ಕೈಯಲ್ಲಿ ವಾಪಾಸ್ಸು ತರೀಕೆರೆ ಟೌನಿನ ಕಡೆಗೆ ಹೋಗಿರುತ್ತಾಳೆಂದು ತಿಳಿಸಿರುತ್ತೇವೆ ಎಂದರೆ ಸರಿಯಲ್ಲ.

4. ಈ ಬಗ್ಗೆ ನಾವು ಸಾರ್ವಜನಿಕರಿಗೆ ವಿಚಾರಿಸಲಾಗಿ ದಿಃ 05.11.2019 ರಂದು ಬೆಳಿಗ್ಗೆ 10.00 ಗಂಟೆಗೆ ಆರೋಪಿತಳು ತನ್ನ ಮಗು ಪ್ರೀತಂ ನನ್ನು ತರೀಕೆರೆಯ ಬಸವೇಶ್ವರ ಆಸ್ಪತ್ರೆಯಿಂದ ಎತ್ತಿಕೊಂಡು ಹಳಿಯೂರು ಗ್ರಾಮದ ಮುಂದೆ ಸೇತುವೆಯ ಬಳಿ ಭದ್ರ ಮೇಲ್ದಂಡೆ ನಾಲೆಯ ಬಳಿಗೆ ಬೆಳಿಗ್ಗೆ 11.00 ಗಂಟೆಗೆ ಹೋಗಿ ನಾಲೆಯಲ್ಲಿ ಹರಿಯುತ್ತಿದ್ದ ನೀರಿಗೆ

ಮಗುವನ್ನು ಹಾಕಿದರೆ ಸಾಯುತ್ತದೆ ಮತ್ತು ಕೊಚ್ಚಿಕೊಂಡು ಹೋಗುತ್ತದೆ ಎಂದು ಸತ್ಯದ ವಿಚಾರ ಗೊತ್ತಿದ್ದರೂ ಸಹ ಸದರಿ ತನ್ನ ಮೂರು ತಿಂಗಳ ಮಗುವನ್ನು ನೀರಿಗೆ ಎಸೆದು ಕೊಲೆ ಮಾಡಿರುತ್ತಾಳೆಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆರೋಪಿತಳನ್ನು ಹಾಗೂ ಮಗುವನ್ನು ನೋಡಿರುತ್ತೇನೆಂದು ಈಗ ಓದಿ ಹೇಳಿದ ನಿಪಿ.6 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

5. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ತಮ್ಮದೇನು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ